# 'ಶ್ರೀರಾಮಕೃಷ್ಣ ವಚನವೇದ'
# ಭಾವಧಾರೆ - 15

ಸ್ವಾಮಿ ನಿತ್ಯಸ್ಥಾನಂದ

## ಮೃತ್ಯುಚಿಂತನೆ

ಶ್ರೀರಾಮಕೃಷ್ಣರು ಈಗ ಒಂದು ಮಹತ್ವಪೂರ್ಣವಾದ ವಿಷಯವನ್ನು ಹೇಳುತ್ತಿದ್ದಾರೆ: ''ಮೃತ್ಯುವನ್ನು ಸರ್ವದಾ ನೆನಸಿಕೊಳ್ಳುವುದು ಒಳ್ಳೆಯದು. ಸತ್ತಮೇಲೆ ಯಾವುದೂ ಹಿಂದೆ ಬಾರದು. ಹಳ್ಳಿಗಳಿಂದ ಜನರು ಕಲ್ಕತ್ತಕ್ಕೆ ಕೆಲಸ ಮಾಡಲು ಬರುವ ಹಾಗೆ ಈ ಜಗತ್ತಿಗೆ ಬಂದಿದ್ದೇವೆ – ಕೆಲವು ಕೆಲಸಗಳನ್ನು ಮಾಡಿ ಹೋಗಲು. ಯಾರಾದರೂ ದೊಡ್ಡ ಮನುಷ್ಯನ ತೋಟ ನೋಡಲು ಬಂದರೆ ಈ ಮ್ಯಾನೇಜರ್ ಅವರಿಗೆ ಹೇಳುತ್ತಾನೆ, 'ಈ ತೋಟ ನಮ್ಮದು','ಈ ಕೊಳ ನಮ್ಮದು', ಇತ್ಯಾದಿ. ಆದರೆ ಏನೋ ತಪ್ಪಿಗಾಗಿ ಯಜಮಾನ ಮ್ಯಾನೇಜರ್‌ನನ್ನು ಕೆಲಸದಿಂದ ತೆಗೆದುಹಾಕಿಬಿಟ್ಟ ಎಂದರೆ, ಆತ ತನ್ನ ಮಾವಿನ ಮರದ ಸಂದೂಕ ತೆಗೆದುಕೊಂಡು ಹೋಗುವುದಕ್ಕೂ ಸಾಧ್ಯವಾಗುವುದಿಲ್ಲ; ಮಾಲಿಯ ಮೂಲಕ ಅದನ್ನು ರಹಸ್ಯವಾಗಿ ಹೊರಕ್ಕೆ ತರಿಸಿಕೊಳ್ಳಬೇಕಾಗುತ್ತದೆ.''(ನಗು)

ಮರಣದ ಮಹಿಮೆಯ ಬಗ್ಗೆ ಮುಕುಂದೂರು ಸ್ವಾಮೀಜಿಯವರ ಮಾತು ತುಂಬ ಸೊಗಸಾಗಿದೆ: ''ಆ ನೋಡು! ಹಂಗೆ ಹೊರಕ್ಕೆ ಹೋಗೋಣ ಅಂತ ಅಂದ್ರೆ, ಈ ಕ್ವಾಣೆಗ್ ಬಾಗಿಲೆ ಇಲ್ದಿದ್ರೆ ಹೊರಗಡೆ ಹೋಗೋದು ಯಂಗೆ, ಆದ್ದರಿಂದ ದೇವರು ಬಲು ಜಾಣ. ಈ ಮನಿಗೆ ಒಂದು ಬಾಗಿಲು ಮಡಗಿದಾನೆ. ಆ ಬಾಗ್ಲೇ ಮರಣ. ಇಲ್ಲಿ ಎಲ್ಲ ಉಂಡು ಉಟ್ಟು ಅನುಭವಿಸಿದ ಮೇಲೆ ಬಾಗಿಲ್ತೆಕ್ಕೊಂಡು ಓಗೋದೇ ಸಾವು. ಒಂದು ವೇಳೆ ಭಗವಂತ ಈ ಸಾವೇ ಇಲ್ಲದೇ ಮಾಡಿದ್ರೆ ನಮ್ಗತಿ! ಏನಾಗ್ತಿತ್ತು ? ಇಲ್ಲೇ ಕೊಳಿಬೇಕಾಗಿತ್ತು. ಅದನ್ನೆಲ್ಲ ನೆನೆಸ್ಕೊಂಡ್ರೆ ದೇವರು ಏಟು ದೊಡ್ಡವನು ಅಂತ ಗೊತ್ತಾಗ್ತೈತೆ. ನಮಗೆ ಬರೋ ಮರಣ ಅವನ ಕರುಣೆ. ಈಗ ನಾನು ಬಾಗಿಲು ತೆಕ್ಕೊಂಡು ವೋಗ್ಬೇಕು. ಪಕ್ಷಿ ಹಾರಿದಂಗೆ ಆಕಾಶದಾಗಲೆಲ್ಲ ಹಾರಾಡ್ಬೇಕು. ಆದರೆ ಈ ಜೀವನ, ಈ ಜಗತ್ತು ಶಂದಾಗಿಲ್ಲ; ಸಾಕು ಅನ್ನೊ ಭಯ ಬ್ಯಾಸರ ಅಲ್ಲ. ಅದೆಲ್ಲ ಬಾಳಲಾರದೋರಾಡೋ ಮಾತು. ನಾನು ಯೇಳೋದು ಹಾಂಗಲ್ಲ. ವಟ್ಟೆ ತುಂಬ ಒಳ್ಳೆ ಊಟ ಉಂಡ್ಮ್ಯಾಲೆ ಸಾಕು ಎಂದು ಎದ್ದು ಕೈ ತೊಳೆಯಲ್ವೇ? ಅಂಗೆ ಸಮಾಧಾನವಾಗಿ ವೋಗ್ಬೇಕು.'' *('ಯೇಗ್ದಾಗೆಲ್ಲ ಐತೆ')*

ಶ್ರೀರಾಮಕೃಷ್ಣರು ಮತ್ತೆ ಮತ್ತೆ ಒತ್ತಿ ಹೇಳುವ ಒಂದು ವಿಷಯವೇನೆಂದರೆ: ''ಭಗವಂತನನ್ನು ಕೇವಲ ಪಾಂಡಿತ್ಯಪೂರ್ಣ ವಿಚಾರದಿಂದಲೇ ಪಡೆಯಲಾಗುವುದಿಲ್ಲ.''

ಒಟ್ಟಾರೆ ನೋಡಿದಾಗ, ಜ್ಞಾನವನ್ನು ನಾವು ಮೂರು ರೀತಿಯಲ್ಲಿ ಪಡೆಯುತ್ತೇವೆ ಎಂದು ಹೇಳಲಾಗಿದೆ:

೧) ಸಾಂಪ್ರದಾಯಿಕ (conventional): ಇದು ಹಿಂದಿನಿಂದ ಪರಂಪರಾನುಗತವಾಗಿ ಬಂದದ್ದು. ಇದು ತಾನಾಗಿಯೇ ಬರುತ್ತದೆ, ಸ್ವಪ್ರಯತ್ನ ಬೇಕಿಲ್ಲ. ಹಿರಿಯರು ಹೇಳಿದ್ದನ್ನು ಕೇಳಿ, ಮಾಡಿದ್ದನ್ನು ನೋಡಿ ಇದನ್ನು ಪಡೆಯಲಾಗುತ್ತದೆ. ವಂಶಕ್ಕೆ, ಜಾತಿಗೆ, ಧರ್ಮಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ನಾವು ಹೀಗೆ ತಿಳಿದುಕೊಳ್ಳುತ್ತೇವೆ. ಮಕ್ಕಳು ಭಾಷೆಯನ್ನು ಕಲಿಯುವ ವಿಧಾನವನ್ನೂ ಇದೇ ವರ್ಗಕ್ಕೆ ಸೇರಿಸಬಹುದು. ಇದು ಹೊರಗಿನಿಂದ ಒಳಗೆ ಹೋಗುವುದು.

೨) ವೈಚಾರಿಕ (reasoning): ಇದು ವಿಚಾರದ ಮೂಲಕ ಪಡೆಯುವ ಜ್ಞಾನ. ಇಲ್ಲಿ ಸ್ವಪ್ರಯತ್ನವಿರುತ್ತದೆ, ಅದೇ ಮುಖ್ಯ. ಶಿಕ್ಷಣದ ಮೂಲಕ ನಾವು ಪಡೆಯುವ ವಿದ್ಯೆಯನ್ನು ಈ ವರ್ಗಕ್ಕೆ ಸೇರಿಸಬಹುದು. ನಾವು ಪುಸ್ತಕ ಓದುವಾಗ, ಅಂತರ್ಜಾಲ ವೀಕ್ಷಣೆಯಲ್ಲಿ ಸ್ವಲ್ಪವಾದರೂ ನಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸದಿದ್ದರೆ ಏನೂ ಅರ್ಥವಾಗುವುದಿಲ್ಲ. ಇದು ಪಡೆಯುವ ಜ್ಞಾನ.

೩) ಅಂತರ್ಬೋಧಾತ್ಮಕ (intuitive): ಇದು ಒಳಗಿನಿಂದ ಹೊರಹೊಮ್ಮುವುದು. ಇಲ್ಲಿಯೂ ಸ್ವಪ್ರಯತ್ನವಿಲ್ಲ, ಅಥವಾ ಸ್ವಪ್ರಯತ್ನದ ಫಲವಲ್ಲ. ದೇವರ ಅಥವಾ ಆತ್ಮಾನುಭವ ಈ ರೀತಿ ಉಂಟಾಗುವಂತಹುದು. ನಮ್ಮ ಎಲ್ಲ ಪ್ರಯತ್ನವೂ ನಿಂತಾಗ ಇದು ಉಂಟಾಗುತ್ತದೆ. ಒಂದು ಹೋಲಿಕೆಯ ಮೂಲಕ ಈ ಮೂರನ್ನೂ ಈ ಕೆಳಗಿನಂತೆ ವಿವರಿಸಬಹುದು: ಪಿತ್ರಾರ್ಜಿತವಾಗಿ ಬಂದ ಸಂಪತ್ತು ಸಾಂಪ್ರದಾಯಿಕ. ತಾನೇ ದುಡಿದು ಸಂಪಾದಿಸಿದ್ದು ವೈಚಾರಿಕ. ಬ್ಯಾಂಕಿನಲ್ಲಿ ಇಟ್ಟ ಹಣದ ಬಡ್ಡಿ ಅಂತರ್ಬೋಧಾತ್ಮಕ. ಇಲ್ಲಿ ಅಸಲು ಮಾತ್ರ ನಮ್ಮದು; ಬಡ್ಡಿ ತಾನಾಗಿಯೇ ಬಂದದ್ದು.

ವಿಚಾರವು ಮನಸ್ಸಿನ ರಾಜ್ಯಕ್ಕೆ ಸೇರಿದ್ದು, ಮನಸ್ಸು ಮಾಯೆಯ ರಾಜ್ಯಕ್ಕೆ ಸೇರಿದ್ದು. ಆದರೆ ದೇವರು ಮಾಯೆಯ ಆಚೆ ಇರುವವನು. ಆದ್ದರಿಂದ ವಿಚಾರದ ಮೂಲಕ ಭಗವಂತನನ್ನು ಪಡೆಯಲಾಗುವುದಿಲ್ಲ. ಅದು ಕತ್ತಲೆಯಲ್ಲಿ ಬೆಳಕನ್ನು ಹುಡುಕಿದಂತಾಗುತ್ತದೆ. ಶಾಸ್ತ್ರದಿಂದ ದೇವರ ಅಸ್ತಿತ್ವ ಅರಿವಾಗುತ್ತದೆ, ಅನುಭವವಾಗುವುದಿಲ್ಲ. ಅಗ್ನಿಯ ಬಗ್ಗೆ ಎಷ್ಟೋ ಓದಬಹುದು, ಅಗ್ನಿ ಏನು ಎಂದು ತಿಳಿಯುವುದು ಅದರ ಹತ್ತಿರ ಹೋದಾಗಲೇ, ಅದನ್ನು ಸ್ಪರ್ಶಿಸಿದಾಗಲೇ. ಹಾಗೆಯೇ ಕೋಪ ಮುಂತಾದ ಭಾವಗಳು. ಕೋಪದ ಬಗ್ಗೆ ತಿಳಿಯುವುದು ಒಂದು, ಅದನ್ನು ಅನುಭವಿಸುವುದು ಇನ್ನೊಂದು. ಅಗ್ನಿಯು ಭೌತಿಕ ವಸ್ತು, ಅದು ದೇಹದೊಡನೆ ಒಂದಾದಾಗ ಅದು ಏನು ಎಂದು ತಿಳಿಯುತ್ತದೆ. ಕೋಪ ಮಾನಸಿಕ ವಿಷಯ. ಅದು ಮನಸ್ಸಿನೊಡನೆ ಒಂದಾದಾಗ ಅದೇ ಎಂದು ತಿಳಿಯುತ್ತದೆ. ದೇವರು ಚೈತನ್ಯ ಸ್ವರೂಪ. ಅವನು ಆತ್ಮನೊಡನೆ ಒಂದಾದಾಗಲೇ ನಿಜವಾಗಿಯೂ ದೇವರ ಅನುಭವವಾಗುತ್ತದೆ. ಆದ್ದರಿಂದ ದೇವರನ್ನು ತಿಳಿಯುವುದೆಂದರೆ ನಮ್ಮನ್ನೇ ನಾವು ಅರಿಯುವುದು. ಒಬ್ಬನಿಗೆ ತಾನು ಮನುಷ್ಯ ಎಂಬುದು ಮರೆತುಹೋಗುತ್ತದೆ. (self-identity). ಅವನು ತನ್ನನ್ನೇ ಹುಡುಕತೊಡಗುತ್ತಾನೆ –ತಾನು ಎಲ್ಲಿ, ತಾನು ಎಲ್ಲಿ ಎಂದು. ಅವನಿಗೆ ಹುಚ್ಚು ಹಿಡಿದಿದೆ ಎಂದು ಅವನನ್ನು ಹುಚ್ಚಾಸ್ಪತ್ರೆಗೆ ಸೇರಿಸಲಾಗುತ್ತದೆ. ಅಲ್ಲಿ ಅವನನ್ನು ಒಂದು ನಿಲುವುಗನ್ನಡಿಯ ಮುಂದೆ ನಿಲ್ಲಿಸುತ್ತಾರೆ. ಆಗ ಅವನಿಗೆ ತಾನು ಮನುಷ್ಯ ಎಂಬುದು ತಿಳಿದುಬರುತ್ತದೆ. ಗುರೂಪದೇಶವು ನಮಗೆ ಕನ್ನಡಿಯಂತೆ.

## ಶ್ರದ್ಧೆಯ ಮಹಿಮೆ

ಕೇವಲ ಶ್ರದ್ಧಾಭಕ್ತಿಯಿಂದಲೇ ಭಗವಂತನನ್ನು ಪಡೆಯಬಹುದು ಎಂಬುದನ್ನು ಒತ್ತಿ ಹೇಳುತ್ತ, ಶ್ರೀರಾಮಕೃಷ್ಣರು ಶ್ರದ್ಧೆಯ ಮಹತ್ವವನ್ನು ಕುರಿತು ಹೇಳುತ್ತಾರೆ: ''ವಿಶ್ವಾಸಕ್ಕೆ ಎಷ್ಟು ಬಲ ಎಂಬುದನ್ನು ಕೇಳು. ಒಬ್ಬ ಸಮುದ್ರ ದಾಟಿ ಲಂಕೆಯಿಂದ ಭಾರತಕ್ಕೆ ಬರಬೇಕಾಗಿತ್ತು. ವಿಭೀಷಣ ಆತನಿಗೆ ಹೇಳಿದ, 'ಈ ವಸ್ತುವನ್ನು ನಿನ್ನ ಪಂಚೆಯ ಕೊನೆಗೆ ಕಟ್ಟಿಕೊ. ನಿರ್ವಿಘ್ನವಾಗಿ ಸಮುದ್ರ ಹಾರಿಬಿಡುತ್ತೀಯೆ. ನೀರಿನ ಮೇಲೆ ನಡೆದು ಹೋಗಲು ಸಾಧ್ಯವಾಗುತ್ತದೆ. ಆದರೆ ಅದನ್ನು ಮಾತ್ರ ಬಿಚ್ಚಿ ನೋಡಬೇಡ; ನೋಡಿದೆಯೋ ಮುಳುಗಿ ಹೋಗುತ್ತೀಯೆ.' ಶ್ರದ್ಧೆಯ ಬಲ ಅಂಥಾದ್ದು, ಆ ಮನುಷ್ಯ ಸುಲಭವಾಗಿ ನೀರಿನ ಮೇಲೆ ನಡೆದು ಹೋಗುತ್ತಿದ್ದ. ಸ್ವಲ್ಪ ದೂರ ಹಾಗೇ ನಡೆದು ಹೋದ ಮೇಲೆ ಆತನಿಗೆ ಯೋಚನೆ ಬಂತು: 'ವಿಭೀಷಣ ನನ್ನ ಪಂಚೆ ತುದಿಗೆ ಎಂಥ ಅದ್ಭುತ ವಸ್ತು ಕಟ್ಟಿರಬೇಕು! ನಾನು ಇಷ್ಟು ಸುಲಭವಾಗಿ ನೀರಿನ ಮೇಲೆ ನಡೆದುಕೊಂಡು ಹೋಗಬೇಕಾದರೆ!' ಹೀಗೆಂದು ಯೋಚಿಸಿ ಗಂಟು ಬಿಚ್ಚಿ ನೋಡುತ್ತಾನೆ, ಕೇವಲ ರಾಮನಾಮ ಬರೆದಿರುವ ಎಲೆ ಮಾತ್ರ ಅದರಲ್ಲಿರುತ್ತದೆ! 'ಓ, ಇದೇನೇ ಇದರೊಳಗಿರುವುದು!' ಎಂಬ ಭಾವನೆ ಬಂದೊಡನೆಯೇ ಆತ ಮುಳುಗಿಹೋದ.''

ಆ ವ್ಯಕ್ತಿಯದು ಎಂಥ ದುರದೃಷ್ಟ! ಅದನ್ನು ನೋಡಿ ರಾಮನಾಮದ ಅದ್ಭುತ ಶಕ್ತಿಯ ಬಗ್ಗೆ ಅವನು ಅತ್ಯಾಶ್ಚರ್ಯ ಪಡಬೇಕಿತ್ತು. ಅದರಲ್ಲಿ ಅವನಿಗೆ ಶ್ರದ್ಧೆ ಜಾಗ್ರತವಾಗಿರಬೇಕಿತ್ತು. ಅದರಿಂದ ಅವನು ಉದ್ಧಾರವಾಗಬಹುದಿತ್ತು. ಅದರ ಬದಲು ರಾಮನಾಮದ ಬಗ್ಗೆ ತಿರಸ್ಕಾರವನ್ನು ಅವನು ವ್ಯಕ್ತಪಡಿಸಿದ್ದರಿಂದ ಮುಳುಗಿಯೇ ಹೋದ. ಹೀಗೆಯೇ ನಾವು ಶ್ರದ್ಧೆಯನ್ನು ಕಳೆದುಕೊಂಡರೆ ಸಂಸಾರ ಸಾಗರದಲ್ಲಿ ಮುಳುಗಿಯೇ ಹೋಗುತ್ತೇವೆ.

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಜನ ಹೇಳುತ್ತಾರೆ, ಹನುಮಂತನಿಗೆ ರಾಮನಾಮದ ಮಹಿಮೆಯಲ್ಲಿ ಅಂಥ ವಿಶ್ವಾಸ, ಅದರ ಬಲದಿಂದ ಆತ ಸಮುದ್ರವನ್ನೇ ಲಂಘನ ಮಾಡಿಬಿಟ್ಟ! ಆದರೆ ಸ್ವಯಂ ರಾಮನೇ ಸೇತುವೆ ಕಟ್ಟಬೇಕಾಯಿತು.''



ಹನುಮಂತನು ರಾಮಬಾಣದಂತೆ ಸಮುದ್ರದ ಮೇಲೆ ಹಾರಿದ ಎಂಬ ಮಾತಿದೆ. ಇದರ ಅರ್ಥ, ಅವನು ತನ್ನ ಶಕ್ತಿಯಿಂದಲ್ಲ, ರಾಮನ ಶಕ್ತಿಯಿಂದ ಸಮುದ್ರವನ್ನು ಹಾರಿದುದು. ರಾಮಬಾಣವು ರಾಮನ ಶಕ್ತಿಯಿಂದಲೇ ತಾನೆ ಹಾರುವುದು! ಆ ಬಾಣಕ್ಕೆ ಮಧ್ಯದಲ್ಲಿ ಪ್ರಜ್ಞೆಯುಂಟಾದರೆ, ತನ್ನ ಶಕ್ತಿಯಿಂದಲೇ ಹಾರುತ್ತಿರುವುದಾಗಿ ಅದು ಭಾವಿಸುತ್ತದೆ. ಆದರೆ ಹನುಮಂತನಿಗೆ ತಾನು ರಾಮನ ಶಕ್ತಿಯಿಂದಾಗಿಯೇ ಹಾರುತ್ತಿರುವುದಾಗಿ ಸಂಪೂರ್ಣ ತಿಳಿದಿತ್ತು. ಅವನ ಶ್ರದ್ಧೆ ಅಂಥಾದ್ದು!

ಶ್ರದ್ಧೆಯ ಮಹಿಮೆಯನ್ನು ಕೊಂಡಾಡುತ್ತ ಶ್ರೀರಾಮಕೃಷ್ಣರು ಶ್ರೀದುರ್ಗೆಯ ಮೇಲಿನ ಹಾಡೊಂದನ್ನು ಹಾಡುತ್ತಿದ್ದಾರೆ:

ನಾ ಪಾಪಿಯಾದರೂ ನನ್ನ ಕಡೆಗಾಲದಲಿ
ನಿನ್ನ ಶ್ರೀನಾಮವನು ಜಪಿಸುತಿರಲು....

ಈ ಸಂದರ್ಭದಲ್ಲಿ ಒಂದು ಸಂಸ್ಕೃತ ಶ್ಲೋಕವು ನೆನಪಿಗೆ ಬರುತ್ತದೆ:

**ವನೇ ಚರಾಮಃ ವಸು ಚಾಹರಾಮಃ**
**ನದೀನ್‌ಸ್ತರಾಮಃ ನ ಭಯಂ ಸ್ಮರಾಮಃ ।**
**ಇತೀರಯಂತೋಽಪಿ ವನೇ ಕಿರಾತಾಃ**
**ಮುಕ್ತಿಂ ಗತಾ ರಾಮಪದಾನುಷಂಗಾತ್ ॥**

''ಕಾಡಿನಲ್ಲಿ ಕಿರಾತಕರು ಈ ರೀತಿ ಮಾತನಾಡಿಕೊಳ್ಳುತ್ತಾರೆ: 'ನಾವು ಕಾಡಿನಲ್ಲಿ ಸುತ್ತಾಡುತ್ತೇವೆ (ಚರಾಮಃ), ಸಂಪತ್ತನ್ನು ದೋಚುತ್ತೇವೆ (ಹರಾಮಃ), ನದಿಯನ್ನು ದಾಟಿ ದೂರ ಹೋಗುತ್ತೇವೆ (ತರಾಮಃ), ನಾವು ಭಯವನ್ನು ಸ್ಮರಿಸುವುದೂ ಇಲ್ಲ (ಸ್ಮರಾಮಃ). ಈ ರೀತಿ 'ರಾಮ' ಶಬ್ದವು ಅವರ ಮಾತಿನಲ್ಲಿ ಮತ್ತೆ ಮತ್ತೆ ಬರುತ್ತಿದ್ದರಿಂದ ಅವರು ಕಳ್ಳರಾದರೂ ಮುಕ್ತಿಯನ್ನು ಪಡೆದರಂತೆ.''

## ನೈತಿಕ ಜೀವನ ಅತ್ಯಾವಶ್ಯಕ

ಈ ಮೇಲಿನ ಮಾತನ್ನು ಹೇಳಿರುವುದು ರಾಮನಾಮದ ಮಹಿಮೆಯನ್ನು ಕೊಂಡಾಡುವುದಕ್ಕಾಗಿ. ನಾವು ಎಂಥ ಜೀವನವನ್ನು ನಡೆಸಿದರೂ ಕೊನೆಗಾಲದಲ್ಲಿ ದೇವರ ನಾಮವನ್ನು ಸುಮ್ಮನೆ ಉಚ್ಚರಿಸುತ್ತ ಪ್ರಾಣಬಿಟ್ಟರೆ ನಾವು ಉದ್ಧಾರವಾಗುತ್ತೇವೆಂಬುದು ಇದರ ಅರ್ಥವಲ್ಲ. ಪುರಾಣದಲ್ಲಿ ಇಂತಹ ಅನೇಕ ಕಥೆಗಳನ್ನು ಜನರಿಗೆ ಹೇಳಿರುವುದರಿಂದ ಜನರಿಗೆ ನೈತಿಕ ಶ್ರದ್ಧೆಯೇ ಹೊರಟು ಹೋಗಿದೆ. ನಾವು ಎಂಥ ಅನೈತಿಕ ಜೀವನವನ್ನು ನಡೆಸಿದರೂ ಪ್ರಾಯಶ್ಚಿತ್ತರೂಪವಾಗಿ ಏನನ್ನಾದರೂ ಆಚರಿಸಿದರೆ ಆ ಪಾಪವೆಲ್ಲ ತೊಳೆದುಹೋಗುತ್ತದೆ ಎಂಬ ಹುಸಿ ನಂಬಿಕೆಯಿಂದಾಗಿ ಜನರು ನೈತಿಕ ಜೀವನಕ್ಕೆ ಪ್ರಾಮುಖ್ಯತೆಯನ್ನೇ ನೀಡುತ್ತಿಲ್ಲ. ಕೊನೆಗಾಲದಲ್ಲಿ ಭಗವನ್ನಾಮ ಯಥಾರ್ಥ ರೂಪದಲ್ಲಿ ಮನಸ್ಸಿಗೆ ಬರಬೇಕಾದರೆ ಜೀವನಪರ್ಯಂತ ಶುದ್ಧ ಧಾರ್ಮಿಕ ಜೀವನವನ್ನು ನಡೆಸಿರಬೇಕಾಗುತ್ತದೆ.

ಈ ಸಂದರ್ಭದಲ್ಲಿ ಭಾಗವತದಲ್ಲಿ ಬರುವ ಇನ್ನೊಂದು ಶ್ಲೋಕವನ್ನು ಉದ್ಧರಿಸಬಹುದು:

**ಅಪಹಾಯ ನಿಜಂ ಕರ್ಮ ಕೃಷ್ಣ ಕೃಷ್ಣೇತಿ ವಾದಿನಃ ।**
**ತೇ ಹರೇರ್ದ್ವಿಷತಃ ಪಾಪಾ ಧರ್ಮಾರ್ಥಂ ಜನ್ಮ ಯದ್ಧರೇಃ ॥**

'ತನ್ನ ಕರ್ತವ್ಯ ಕರ್ಮವನ್ನು ಬಿಟ್ಟು ಯಾಂತ್ರಿಕವಾಗಿ 'ಕೃಷ್ಣ, ಕೃಷ್ಣ' ಎಂದು ಜಪಿಸುತ್ತ ಕುಳಿತುಕೊಳ್ಳುವವರು ಹರಿಯನ್ನು ದ್ವೇಷಿಸುವ ಪಾಪಿಗಳು. ಏಕೆಂದರೆ ಹರಿಯು ಅವತರಿಸುವುದೇ ಧರ್ಮವನ್ನು ರಕ್ಷಿಸುವುದಕ್ಕಾಗಿ.' ಈ ರೀತಿ ಜಪಿಸುತ್ತ ಕುಳಿತುಕೊಳ್ಳುವುದು ತಮ್ಮ ಕರ್ತವ್ಯದಿಂದ ದೂರ ಸರಿಯುವುದಕ್ಕೆ. ಇದರ ಬದಲು ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯ ಪರಿಪಾಲನೆ ಮಾಡಿದರೆ ಹರಿಯ ಧರ್ಮರಕ್ಷಣೆಯ ಕಾರ್ಯದಲ್ಲಿ ಭಾಗವಹಿಸಿದಂತಾಗುತ್ತದೆ. ಆದರೆ ಅತ್ಯಂತ ಶ್ರದ್ಧಾಭಕ್ತಿಯಿಂದ, ಅನನ್ಯ ಭಕ್ತಿಯಿಂದ ಭಗವಂತನನ್ನು ಕರೆಯುವುದು ಸಾಧ್ಯವಾದರೆ ಆಗ ಕರ್ತವ್ಯಗಳೆಲ್ಲ ತಾವಾಗಿಯೇ ಬಿದ್ದುಬಿಡುತ್ತವೆ. ಶ್ರೀರಾಮಕೃಷ್ಣರು ಹೇಳುತ್ತಾರೆ:

''ಭಗವಂತನನ್ನು ಅತ್ಯಂತವಾಗಿ ಪ್ರೀತಿಸುವುದೇ, ಆತನಲ್ಲಿ ಭಕ್ತಿಯನ್ನು ತದ್ಗತ ಮಾಡುವುದೇ ಬೇಕಾಗಿರುವುದು. ಅಮೃತತ್ವ ಸರೋವರ ತಾನೆ ಸುಧಾಸರೋವರ? ಅದರಲ್ಲಿ ಮುಳುಗಿದರೆ ಮನುಷ್ಯ ಸಾಯುವುದಿಲ್ಲ, ಅಮರನಾಗಿಬಿಡುತ್ತಾನೆ. ಕೆಲಕೆಲವರು ಭಾವಿಸುತ್ತಾರೆ, ಹೆಚ್ಚಾಗಿ 'ಭಗವಂತ, ಭಗವಂತ' ಎಂದು ಕರೆಯಲು ಶುರು ಮಾಡಿದರೆ ಕೊನೆಗೆ ಹುಚ್ಚುಹಿಡಿದುಬಿಡುತ್ತದೆ ಎಂಬುದಾಗಿ. ಅದು ಸತ್ಯವಲ್ಲ. ಭಗವಂತ ಸುಧೆಯ ಸರೋವರ, ಅಮೃತ ಸಾಗರ. ವೇದದಲ್ಲಿ ಆತನನ್ನು 'ಅಮೃತ ಸ್ವರೂಪ' ವೆಂಬುದಾಗಿ ವರ್ಣಿಸಿದೆ. ಅದರಲ್ಲಿ ಮುಳುಗಿದರೆ ಮನುಷ್ಯ ಸಾಯುವುದಿಲ್ಲ – ಅದಕ್ಕೆ ಬದಲು ಅಮರನಾಗಿಬಿಡುತ್ತಾನೆ.''

## ಕರ್ಮ ತಾನಾಗಿ ಬಿದ್ದುಹೋಗುತ್ತದೆ

''ಭಗವಂತನಲ್ಲಿ ಅನುರಾಗ ಉಂಟಾಯಿತು ಎಂದರೆ, ಈ ಕರ್ಮಗಳ ವಿಷಯವಾಗಿ ಅತಿಯಾಗೇನು ತಲೆಗೆ ಹಚ್ಚಿಕೊಳ್ಳಬೇಕಾಗಿಲ್ಲ. ಗಾಳಿ ಬೀಸದವರೆಗೆ ಮಾತ್ರ ಬೀಸಣಿಗೆಯ ಆವಶ್ಯಕತೆ. ತಂಗಾಳಿ ಬೀಸಲಾರಂಭಿಸಿತು ಎಂದರೆ ಬೀಸಣಿಗೆಯನ್ನು ಕೆಳಕ್ಕೆ ಇಟ್ಟುಬಿಡಬಹುದು. ಬಳಿಕ ಬೀಸಣಿಗೆಯ ಆವಶ್ಯಕತೆ ಏನಿದೆ?''

ಅದೇ ರೀತಿಯೇ, ಶ್ರೀರಾಮಕೃಷ್ಣರು ಹೇಳುವಂತೆ, ಯಾವ ಭಗವದನುಭವಕ್ಕಾಗಿ ಸಾಧನೆ ಮಾಡುತ್ತೇವೆಯೋ, ಆ ಅನುಭವವಾದ ಮೇಲೆ ಇನ್ನು ಸಾಧನೆಯ ಆವಶ್ಯಕತೆ ಇರುವುದಿಲ್ಲ. ನದಿ ದಾಟಿಯಾದ ಮೇಲೆ ಯಾರೂ ದೋಣಿಯನ್ನು ಹೊತ್ತುಕೊಂಡು ಹೋಗುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟ ಸೊಗಸಾದ ಎರಡು ಶ್ಲೋಕಗಳು ಮೈತ್ರಿಕೋಪನಿಷತ್ತಿನಲ್ಲಿ ಬರುತ್ತವೆ:

**ಮೃತಾ ಮೋಹಮಯೀ ಮಾತಾ ಜಾತೋ ಬೋಧಮಯಃ ಸುತಃ ।**
**ಸೂತಕದ್ವಯಸಂಪ್ರಾಪ್ತೌ ಕಥಂ ಸಂಧ್ಯಾಮುಪಾಸ್ಮಹೇ ॥**
**ಹೃದಾಕಾಶೇ ಚಿದಾದಿತ್ಯಃ ಸದಾ ಭಾಸತಿ ಭಾಸತಿ ।**
**ನಾಸ್ತಮೇತಿ ನ ಚೋದೇತಿ ಕಥಂ ಸಂಧ್ಯಾಮುಪಾಸ್ಮಹೇ ॥**

'ಮೋಹಮಯೀ ಎಂಬ ತಾಯಿಯು ತೀರಿಕೊಂಡಿದ್ದಾಳೆ, ಬೋಧಮಯ ಎಂಬ ಸುತನು ಜನಿಸಿದ್ದಾನೆ. ಹೀಗೆ ಎರಡು ಸೂತಕಗಳು ಇರುವಾಗ ಸಂಧ್ಯಾವಂದನೆಯನ್ನು ಹೇಗೆ ಮಾಡಲಿ? ಹೃದಯಾಕಾಶದಲ್ಲಿ ಚಿತ್ ಎಂಬ ಆದಿತ್ಯನು ಸದಾ ಬೆಳಗುತ್ತಿದ್ದಾನೆ. ಅವನು ಮುಳುಗುತ್ತಿದ್ದಾನೆ, ಉದಯಿಸುವುದೂ ಇಲ್ಲ, ಸಂಧ್ಯಾವಂದನೆಯನ್ನು ಹೇಗೆ ಮಾಡಲಿ?' ಇದು ಎಲ್ಲ ವಿಧಿನಿಷೇಧಗಳನ್ನೂ ಮೀರಿರುವ ಸ್ಥಿತಿ.

ಶ್ರೀರಾಮಕೃಷ್ಣರು ಈಗ ವಿದ್ಯಾಸಾಗರನನ್ನು ಕುರಿತು ಹೇಳುತ್ತಿದ್ದಾರೆ:

''ನೀನು ಮಾಡುತ್ತಿರುವ ಕರ್ಮಗಳೆಲ್ಲ ಸತ್ಕರ್ಮಗಳು. ನಾನು ಕರ್ತ ಎಂಬ ಅಹಂಕಾರ ತೊರೆದು ನಿಷ್ಕಾಮ ಭಾವನೆಯಿಂದ ಮಾಡುವುದಾದರೆ ಬಹಳ ಒಳ್ಳೆಯದು. ಈ ರೀತಿ

ಯಾಗಿ ನಿಷ್ಕಾಮಕರ್ಮ ಮಾಡುತ್ತ, ಮಾಡುತ್ತ ಮುಂದುವರಿದರೆ ಕೊನೆಗೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ.''

ಬರಿಯ ನಿಷ್ಕಾಮಕರ್ಮದಿಂದಲೇ ಭಗವತ್ಸಾಕ್ಷಾತ್ಕಾರವಾಗುತ್ತದೆಯೆ? ಶ್ರೀರಾಮಕೃಷ್ಣರ ಪ್ರಕಾರ ಇಂತಹ ಕರ್ಮದ ಜೊತೆಗೆ ಭಗವಂತನಲ್ಲಿ ಶ್ರದ್ಧಾಭಕ್ತಿಯೂ ಇರಬೇಕಾಗುತ್ತದೆ. ಆಗ ಕ್ರಮೇಣ ಕರ್ಮ ಬಿದ್ದುಹೋಗುತ್ತದೆ. ಇದೇ ವಿಷಯವನ್ನು ಮುಂದುವರಿಸುತ್ತ ಅವರು ಹೇಳುತ್ತಾರೆ:

''ಭಗವಂತನಲ್ಲಿ ನಿನಗೆ ಭಕ್ತಿಪ್ರೇಮ ದೊರೆತಷ್ಟೂ ನಿನ್ನ ಕರ್ಮ ಕಡಮೆಯಾಗುತ್ತಾ ಬಂದುಬಿಡುತ್ತದೆ. ಸೊಸೆ ಗರ್ಭಿಣಿಯಾದರೆ ಅತ್ತೆ ಆಕೆಯ ಕೆಲಸವನ್ನು ಕಡಿಮೆ ಮಾಡಿಕೊಳ್ಳುತ್ತಾಳೆ. ತಿಂಗಳು ಆದಷ್ಟು ಆಕೆಯ ಪಾಲಿನ ಕೆಲಸ ಕಡಿಮೆ ಕಡಿಮೆಯಾಗುತ್ತ ಹೋಗುತ್ತದೆ. ಒಂಬತ್ತು ತಿಂಗಳು ತುಂಬಿತು ಎಂದರೆ, ಹೊಟ್ಟೆಯಲ್ಲಿ ಮಗುವಿಗೆ ಏನಾದರೂ ಅಪಾಯ ಸಂಭವಿಸಬಹುದೋ, ಹೆರಿಗೆ ಸಮಯದಲ್ಲಿ ಏನಾದರೂ ತೊಂದರೆಯಾಗಬಹುದೋ ಏನೋ ಎಂದು ಹೆದರಿ ಆಕೆಯ ಕೈಯಲ್ಲಿ ಯಾವ ಕೆಲಸವನ್ನೂ ಮಾಡಿಸುವುದೇ ಇಲ್ಲ.'' (ನಗು)

ಕರ್ಮ ಕ್ರಮೇಣ ಬಿದ್ದುಹೋಗಬೇಕು, ನಾವಾಗಿಯೇ ಅದರಿಂದ ತಪ್ಪಿಸಿಕೊಳ್ಳಬಯಸಬಾರದು, ಮತ್ತು ಪ್ರಯತ್ನಿಸಲೂಬಾರದು. ಶ್ರೀರಾಮಕೃಷ್ಣರು ಹೇಳುವಂತೆ ತೆಂಗಿನ ಮರ ಬೆಳೆಯುತ್ತ ಹೋದಂತೆ ಅದರ ಗರಿ ಕೆಳಗೆ ಬೀಳುತ್ತ ಹೋಗುತ್ತದೆ. ಅದಿಲ್ಲದೆ ಬಲಪ್ರಯೋಗದಿಂದ ಅದನ್ನು ಎಳೆದು ಕಿತ್ತರೆ ಮರಕ್ಕೆ ಪೆಟ್ಟಾಗುತ್ತದೆ. ನಮ್ಮ ಸಂಪ್ರದಾಯದ ಪ್ರಕಾರ ಮೊದಲು ಕರ್ಮಕಾಂಡ, ಆನಂತರ ಉಪಾಸನಾಕಾಂಡ ಮತ್ತು ಕೊನೆಯಲ್ಲಿ ಜ್ಞಾನಕಾಂಡ. ಮೊದಲು ಧಾರ್ಮಿಕ ಕ್ರಿಯಾವಿಧಿಗಳನ್ನೂ, ನಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ಶ್ರದ್ಧೆಯಿಂದಲೂ ನೀತಿಬದ್ಧವಾಗಿಯೂ ನಿರ್ಲಿಪ್ತ ಮನೋಭಾವದಿಂದಲೂ ನೆರವೇರಿಸುತ್ತ ಹೋದರೆ, ಕ್ರಮೇಣ ಮನಸ್ಸು ಪರಿಶುದ್ಧವಾಗಿ ಧ್ಯಾನಕ್ಕೆ ಯೋಗ್ಯವಾಗುತ್ತದೆ, ಅಂದರೆ ಇಷ್ಟದೇವತೆಯನ್ನು ಕುರಿತು ಏಕಾಗ್ರ ಮನಸ್ಸಿನಿಂದ ಧ್ಯಾನ ಮಾಡಲು ಸಾಧ್ಯವಾಗುತ್ತದೆ. ಇದು ಉಪಾಸನಾಕಾಂಡ ಅಥವಾ ಸಗುಣೋಪಾಸನೆ. ಇದರಲ್ಲಿ ಮುಂದುವರಿದಂತೆ ಸಾಧಕನು ಆತ್ಮನನ್ನು ಕುರಿತು ಧ್ಯಾನಮಾಡುವ ಸ್ಥಿತಿಯನ್ನು ಪಡೆಯುತ್ತಾನೆ. ಇದು ನಿರ್ಗುಣೋಪಾಸನೆ ಎನಿಸಿಕೊಳ್ಳುವ ಜ್ಞಾನಕಾಂಡ. ಹಂತಹಂತವಾಗಿ ಕರ್ಮಗಳು ಕಡಿಮೆಯಾಗುತ್ತ ಬಂದು ಕೊನೆಯಲ್ಲಿ ಸಮಾಧಿಸ್ಥಿತಿಯನ್ನು ಮುಟ್ಟಿದಾಗ ಎಲ್ಲ ಕರ್ಮವೂ ನಿಂತುಹೋಗುತ್ತದೆ. ಸಂಗೀತ ಕಲಿಯುವಾಗ ಮೊದಲು ರಾಗ, ತಾಳ, ಸ್ವರಗಳು, ಹಾಡಿನ ಬರಹ ಇತ್ಯಾದಿಗಳ ಕಡೆ ವಿಶೇಷ ಗಮನ ನೀಡಬೇಕಾಗುತ್ತದೆ. ಸಂಗೀತದಲ್ಲಿ ಪ್ರಾವೀಣ್ಯತೆಯನ್ನು ಪಡೆದಮೇಲೆ ಇವೆಲ್ಲವೂ ಅತ್ಯಂತ ಸ್ವಾಭಾವಿಕವಾಗಿ, ಹಾಡುಗಾರನು ಈಗ ರಾಗವೊಂದರ ಮೇಲೆಯೇ ತನ್ನ ಸಂಪೂರ್ಣ ಮನಸ್ಸನ್ನು ತೊಡಗಿಸುತ್ತಾನೆ, ಬೇರಾವುದರ ಕಡೆಗೂ ಅವನು ಗಮನಕೊಡಬೇಕಾಗಿಯೇ ಬರುವುದಿಲ್ಲ. ಇದೇ ರೀತಿ ಆಧ್ಯಾತ್ಮಿಕ ಜೀವನದಲ್ಲಿಯೂ ಧ್ಯೇಯವಸ್ತುವೊಂದೇ ಉಳಿದು ಬೇರೆಲ್ಲ ಕ್ರಿಯೆಗಳು ಬಿದ್ದುಹೋಗುತ್ತವೆ.

### ಕರ್ಮದ ಹಿಂದೆ ಇರಬೇಕಾದ ಭಾವ

ಶ್ರೀರಾಮಕೃಷ್ಣರು ವಿದ್ಯಾಸಾಗರನನ್ನು ಕುರಿತು ಹೇಳುತ್ತಾರೆ: ''ನೀನು ಈ ಕೆಲಸಗಳನ್ನೆಲ್ಲ ಮಾಡುತ್ತಾ ಇದ್ದೀಯಲ್ಲ, ಇದರಿಂದ ನಿಜವಾಗಿ ನೀನು ನಿನಗೇ ಉಪಕಾರ ಮಾಡಿಕೊಳ್ಳುತ್ತಾ ಇದ್ದೀಯೆ. ನಿಷ್ಕಾಮ ಭಾವನೆಯಿಂದ ಕೆಲಸ ಮಾಡಲು ಸಾಧ್ಯವಾದರೆ ಚಿತ್ತಶುದ್ಧಿ ಉಂಟಾಗುತ್ತದೆ, ಭಗವಂತನಲ್ಲಿ ನಿನಗೆ ಪ್ರೀತಿ ಉಂಟಾಗುತ್ತದೆ. ಪ್ರೀತಿ ಉಂಟಾಯಿತು ಎಂದರೆ ಆತನ ಸಾಕ್ಷಾತ್ಕಾರ ಪಡೆದುಕೊಳ್ಳುತ್ತೀಯೆ.''

ಶ್ರೀಶಂಕರಾಚಾರ್ಯರು ಹೇಳುತ್ತಾರೆ: *(ವಿವೇಕ ಚೂಡಾಮಣಿ, ೧೧)*

**ಚಿತ್ತಸ್ಯ ಶುದ್ಧಯೇ ಕರ್ಮ ನ ತು ವಸ್ತೂಪಲಬ್ಧಯೇ ।**

''ಕರ್ಮದಿಂದ ಚಿತ್ತ ಶುದ್ಧಿಯಾಗುತ್ತದೆ, ಆದರೆ ಆತ್ಮವಸ್ತುವನ್ನು ಪಡೆಯಲಾಗುವುದಿಲ್ಲ.'' ಅವರ ಪ್ರಕಾರ ಚಿತ್ತಶುದ್ಧಿಯ ಮೂಲಕ ಜ್ಞಾನಸಾಧನೆಗೆ ಅರ್ಹತೆಯುಂಟಾಗುತ್ತದೆ, ಮತ್ತು ಶ್ರವಣ, ಮನನಾದಿ ಜ್ಞಾನಸಾಧನೆಯ ಮೂಲಕ ಆತ್ಮಾನುಭವವಾಗುತ್ತದೆ. ಶ್ರೀರಾಮಕೃಷ್ಣರು ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ: ಕರ್ಮದಿಂದ ಚಿತ್ತಶುದ್ಧಿ, ಇದರಿಂದ ಭಕ್ತಿ, ಭಕ್ತಿಯಿಂದ ಭಗವತ್ಸಾಕ್ಷಾತ್ಕಾರ.

ಶ್ರೀರಾಮಕೃಷ್ಣರು ವಿದ್ಯಾಸಾಗರನನ್ನು ಕುರಿತು ಹೇಳುತ್ತಾರೆ: ''ಮನುಷ್ಯ ಜಗತ್ತಿಗೆ ನಿಜವಾಗಿ ಉಪಕಾರ ಮಾಡಲಾರ; ಭಗವಂತನು ಮಾಡಬಲ್ಲ. ಯಾರು ಚಂದ್ರಸೂರ್ಯರನ್ನು ಸೃಷ್ಟಿಸಿದ್ದಾನೊ, ಯಾರು ತಂದೆತಾಯಿಗಳ ಅಂತರ್ಯದಲ್ಲಿ ಪ್ರೀತಿ ಇಟ್ಟಿದ್ದಾನೊ, ಯಾರು ಮಹಾಪುರುಷರಲ್ಲಿ ದಯೆ ಬೆಳೆಸಿದ್ದಾನೊ, ಯಾರು ಸಾಧು ಭಕ್ತರ ಹೃದಯದಲ್ಲಿ ಭಕ್ತಿ ಮೂಡುವಂತೆ ಮಾಡಿದ್ದಾನೊ ಆತ ಆ ಕಾರ್ಯ ಮಾಡುತ್ತಾನೆ. ಯಾರು ಕಾಮನಾಶೂನ್ಯನಾಗಿ ಕೆಲಸ ಮಾಡುತ್ತಾನೊ ಆತ ತನಗೇ ತಾನು ಶ್ರೇಯಸ್ಸು ತಂದುಕೊಳ್ಳುತ್ತಾನೆ.''

*(ಮುಂದುವರಿಯುವುದು)*

**ನ ತಥ್ಯವಚನಂ ಸತ್ಯಂ ನಾತಥ್ಯವಚನಂ ಮೃಷಾ ।**
**ಯದ್ಭೂತಹಿತಮತ್ಯಂತಂ ತತ್ಸತ್ಯಮಿತರನ್ಮೃಷಾ ॥**

ನಿಜವಾದದ್ದನ್ನು ಹೇಳುವ ಮಾತು ಸತ್ಯವಲ್ಲ; ನಿಜವಲ್ಲದುದನ್ನು ಹೇಳುವ ಮಾತು ಸುಳ್ಳಲ್ಲ. ಯಾವುದು ಪ್ರಾಣಿಗಳಿಗೆ ಅತ್ಯಂತ ಹಿತವಾದುದೋ ಅದು ಸತ್ಯ ; ಹಾಗಲ್ಲದುದು ಸುಳ್ಳು.

— ಸುಭಾಷಿತ